ಅಂತಿಮ ದೇವಗ್ರಂಥ
ಕುರ್‌ಆನ್

28



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575:014
PH: 0824-2271449 MOB: 8722695551

ಕುರ್‌ಆನ್ ಎಂದರೇನು?

ಕುರ್‌ಆನ್ ಅಕ್ಷರಶಃ ದೇವನ ವಚನಗಳಾಗಿವೆ. ಸರ್ವ-ಶಕ್ತನು (ಅರೇಬಿಕ್ ಭಾಷೆಯಲ್ಲಿ ಅವನನ್ನು 'ಅಲ್ಲಾಹು' ಎಂದು ಕರೆಯುತ್ತೇವೆ) ಅವನ ಸಂದೇಶವಾಹಕರಾದ ಮುಹಮ್ಮದ್(ﷺ) ರಿಗೆ ಜಿಬ್ರೀಲ್ ಎಂಬ ದೇವದೂತರ ಮೂಲಕ ಅದನ್ನು ಅವತೀರ್ಣಗೊಳಿಸಿದನು.

"ಈ ಗ್ರಂಥದ ಅವತೀರ್ಣವು ಪ್ರತಾಪಶಾಲಿಯೂ, ಯುಕ್ತಿಪೂರ್ಣನೂ ಆದ ಅಲ್ಲಾಹನ ವತಿಯಿಂದಾಗಿ-ದೆ." (ಕುರ್‌ಆನ್ 39:1)

ಮಾನವ ಸಮೂಹಕ್ಕೆ ಮಾರ್ಗದರ್ಶಿ

"ಜನರಿಗೆ ಸನ್ಮಾರ್ಗವನ್ನು ತೋರಿಸಿಕೊಡುವ ಮತ್ತು ಸತ್ಯ ಹಾಗೂ ಅಸತ್ಯವನ್ನು ಬೇರ್ಪಡಿಸುವ ಸುಸ್ಪಷ್ಟ ಪ್ರಮಾಣ-ವಾಗಿ..." (ಕುರ್‌ಆನ್ 2:185)

ಇದು ಜನರಿಗೆ ಸತ್ಯ ಯಾವುದು ಮಿಥ್ಯ ಯಾವುದು ಎಂದು ಸ್ಪಷ್ಟಪಡಿಸಿಕೊಡುವ ಆಧಾರ ಪ್ರಮಾಣಗಳನ್ನು ಒದಗಿಸುತ್ತದೆ. ಸರಿ-ತಪ್ಪುಗಳನ್ನು ಬೇರ್ಪಡಿಸಿ ತೋರಿ-ಸುತ್ತದೆ. ಇದನ್ನು ಸದುಪಯೋಗಪಡಿಸದ ಮನುಷ್ಯನು ಖಂಡಿತವಾಗಿಯೂ ನಷ್ಟ ಅನುಭವಿಸುವನು.

ಅಂತಿಮ ದಿವ್ಯ ಗ್ರಂಥ

ಸರ್ವಶಕ್ತನಾದ ಅಲ್ಲಾಹು ಈ ಲೋಕದ ಜನರಿಗೆ ಅವ-ತೀರ್ಣಗೊಳಿಸಿದ ದಿವ್ಯ ಗ್ರಂಥಗಳಲ್ಲಿ ಇದು ಕಟ್ಟಕಡೆಯ ಗ್ರಂಥವಾಗಿದೆ. ಇದು ಹಿಂದಿನ ದಿವ್ಯ ಗ್ರಂಥಗಳಲ್ಲಿ ಉಳಿ-ದುಕೊಂಡಿರುವ ಸತ್ಯಾಂಶಗಳನ್ನು ದೃಢೀಕರಿಸುತ್ತ-ದೆ ಮತ್ತು ಅವುಗಳಲ್ಲಿ ಜನರು ನಡೆಸಿರುವ ತಿದ್ದುಪಡಿ ಮತ್ತು ಕೃತ್ರಿಮಗಳನ್ನು ಬಹಿರಂಗಪಡಿಸುತ್ತದೆ. ಮಾತ್ರ-ವಲ್ಲದೆ ಕುರ್‌ಆನ್ ಈ ಹಿಂದೆ ಅಲ್ಲಾಹು ಅವತೀರ್ಣ-ಗೊಳಿಸಿದ ಎಲ್ಲಾ ದಿವ್ಯ ಗ್ರಂಥಗಳ ಪೂರ್ತೀಕರಣವಾಗಿದೆ.

"ಓ ಗ್ರಂಥ ನೀಡಲಾದವರೇ! ನಿಮ್ಮ ಬಳಿಯಿರುವ ಗ್ರಂಥವನ್ನು ದೃಢೀಕರಿಸುತ್ತಾ ನಾವು ಅವತೀರ್ಣಗೊಳಿಸಿದ ಸಂದೇಶದಲ್ಲಿ ವಿಶ್ವಾಸವಿಡಿ." (ಕುರ್‌ಆನ್ 4:49)

ಕುರ್‌ಆನ್ ಅವತೀರ್ಣವಾದದ್ದು ಹೇಗೆ?

ಕುರ್‌ಆನ್ ಮುಹಮ್ಮದ್(ﷺ) ರಿಗೆ ಅವರ ಭಾಷೆಯಲ್ಲೇ (ಅರೇಬಿಕ್) ಅವತೀರ್ಣವಾಯಿತು. ಇಂದೂ ಸಹ ಅದೇ ಭಾಷೆಯಲ್ಲಿದೆ. ಜಗತ್ತಿನ ವಿವಿಧ ಭಾಷೆಗಳಿಗೆ ಅದು ಈಗಾಗಲೇ ಭಾಷಾಂತರವಾಗಿದೆ.

ಕುರ್‌ಆನ್ ಒಂದು ಗ್ರಂಥದ ರೂಪದಲ್ಲಿ ಏಕಕಾಲದಲ್ಲಿ ಆಕಾಶದಿಂದ ಇಳಿದಿಲ್ಲ. ಬದಲಾಗಿ 23 ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ಅದು ಅವತೀರ್ಣವಾಗಿದೆ.

ಕುರ್‌ಆನಿನ ವಚನಗಳನ್ನು ಸಮರ್ಪಕವಾಗಿ ಗ್ರಹಿಸಿಕೊಳ್ಳಲು ಅದು ಅವತೀರ್ಣವಾದ ಸಮಯ–ಸಂದರ್ಭಗಳನ್ನು ತಿಳಿಯಬೇಕಾಗಿದೆ. ಅನ್ಯಥಾ ಅದರ ಬೋಧನೆಯ-

ನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದು.

ಅದು ದೇವವಾಣಿ ಎಂದು ನಾನು ಹೇಗೆ ನಂಬಲಿ?

ಸುರಕ್ಷಿತ ಗ್ರಂಥ

ಜಗತ್ತಿನಲ್ಲಿ ಸುದೀರ್ಘಕಾಲದಿಂದ ಅತ್ಯಧಿಕ ಜನರಿಂದ ಓದಲಾಗುವ ಏಕೈಕ ಪವಿತ್ರ ಗ್ರಂಥ ಕುರ್‌ಆನ್ ಆಗಿದೆ. ಇಂದು ಕೂಡ ಅದು ಅವತೀರ್ಣವಾದ ದಿನದಲ್ಲಿ ಇದ್ದ-ಷ್ಟೇ ಪವಿತ್ರವಾಗಿ ಮತ್ತು ನಿಷ್ಕಳಂಕವಾಗಿ ಅಸ್ತಿತ್ವದಲ್ಲಿದೆ. 1400 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಅದರಲ್ಲಿ ಯಾವುದೇ ಒಂದು ಅಕ್ಷರ ಸೇರ್ಪಡೆಯಾಗುವುದು ಅಥವಾ ತೆಗೆದುಹಾಕುವುದು ಸಂಭವಿಸಿಲ್ಲ ಎನ್ನುವುದು ಅದರ ಹೆಗ್ಗಳಿಕೆಯಾಗಿದೆ.

“ಖಂಡಿತವಾಗಿಯೂ ಈ ಉಪದೇಶವನ್ನು ಅವತೀರ್ಣ-ಗೊಳಿಸಿದವರು ನಾವೇ ಆಗಿದ್ದೇವೆ ಮತ್ತು ನಾವು ಖಂ-

ಡಿತವಾಗಿಯೂ ಇದನ್ನು ಸಂರಕ್ಷಿಸುವೆವು." (ಕುರ್‌ಆನ್ 15:9)

ಕುರ್‌ಆನ್ ಕೇವಲ ಗ್ರಂಥದಲ್ಲಿ ಮಾತ್ರ ಸುರಕ್ಷಿತವಾಗಿ ಇರುವುದಲ್ಲ. ಬದಲಾಗಿ ಜಗತ್ತಿನಾದ್ಯಂತ ಅಪಾರ ಸಂಖ್ಯೆಯ ಪುರುಷರು, ಮಕ್ಕಳು ಮತ್ತು ಸ್ತ್ರೀಯರ ಹೃದಯಗಳಲ್ಲಿ ಅದು ಕಂಠಪಾಠದ ರೂಪದಲ್ಲಿ ಸುರಕ್ಷಿತವಾಗಿದೆ. ಕುರ್‌ಆನ್ ಕಂಠಪಾಠ ಮಾಡಿರುವ ಲಕ್ಷಾಂತರ ಜನರು ಇಂದೂ ಪ್ರಪಂಚದಲ್ಲಿ ಬದುಕಿದ್ದಾರೆ.

ವೈಜ್ಞಾನಿಕ ಅದ್ಭುತಗಳು

ಪವಿತ್ರ ಕುರ್‌ಆನ್ ಆಧುನಿಕ ವಿಜ್ಞಾನದೊಂದಿಗೆ ಸಂಘರ್ಷದಲ್ಲಿ ಏರ್ಪಡುವುದಿಲ್ಲ. ಬದಲಾಗಿ ಅದರೊಂದಿಗೆ ಸಹಕರಿಸುತ್ತದೆ. ಕುರ್‌ಆನಿನ ಒಂದು ಉಲ್ಲೇಖನೀಯ ವೈಶಿಷ್ಟ್ಯತೆ ಏನೆಂದರೆ ಅದರಲ್ಲಿರುವ ಕೆಲವು ವಚನಗಳು ನೇರವಾಗಿ ಪ್ರಕೃತಿಯ ವಿಸ್ಮಯಗಳನ್ನು ವಿವರಿಸಿ

ಕೊಡುತ್ತವೆ. ಭ್ರೂಣಶಾಸ್ತ್ರ, ಪವನಶಾಸ್ತ್ರ, ಖಗೋಳಶಾಸ್ತ್ರ, ಭೂಗರ್ಭಶಾಸ್ತ್ರ, ಸಾಗರಶಾಸ್ತ್ರಗಳಿಗೆ ಸಂಬಂಧಿಸಿದ ರಹಸ್ಯಗಳನ್ನು ಕುರ್‌ಆನ್ ತೆರೆದಿಡುತ್ತದೆ. ಏಳನೇ ಶತಮಾನದ ಈ ಗ್ರಂಥದ ವೈಜ್ಞಾನಿಕ ವಿವರಣೆಗಳಲ್ಲಿ ನಂಬಲು ಅಸಾಧ್ಯವೆನಿಸುವಂತಹ ಸತ್ಯಾಂಶಗಳಿವೆ ಎನ್ನುವುದನ್ನು ಆಧುನಿಕ ವಿಜ್ಞಾನಿಗಳು ದೃಢೀಕರಿಸಿರುವುದು ಅದರ ದೈವಿಕತೆಯನ್ನು ಸಾರುತ್ತದೆ.

"ಕುರ್‌ಆನ್ ಸತ್ಯವೆಂದು ಅವರಿಗೆ ಸ್ಪಷ್ಟವಾಗುವ ರೀತಿಯಲ್ಲಿ ದಿಗಂತದಲ್ಲಿ ಮತ್ತು ಸ್ವತಃ ಅವರಲ್ಲೂ ನಾವು ಅವರಿಗೆ ಸದ್ಯವೇ ನಮ್ಮ ದೃಷ್ಟಾಂತಗಳನ್ನು ತೋರಿಸಿ ಕೊಡುತ್ತೇವೆ." (ಕುರ್‌ಆನ್ 41:53)

ವಾಸ್ತವದಲ್ಲಿ ಕುರ್‌ಆನಿನಲ್ಲಿ ಉಲ್ಲೇಖವಿರುವ ಹಲವಾರು ವೈಜ್ಞಾನಿಕ ಸತ್ಯಗಳು ಇತ್ತೀಚೆಗಷ್ಟೇ ಬೆಳಕಿಗೆ ಬಂದವು. ಅದು ಕೂಡ ಅತ್ಯಾಧುನಿಕ ತಂತ್ರಜ್ಞಾನದ ಸಹಕಾರದಿಂದ. ಕೆಳಗಿನ ಅಂಶಗಳನ್ನು ಗಮನಿಸಿ.

ಮಾನವ ಭ್ರೂಣದ ಬೆಳವಣಿಗೆಯ ಕುರಿತು ಕುರ್‌ಆನ್ ಬಹಳ ವಿಸ್ತಾರವಾದ ವಿವರಣೆ ನೀಡುತ್ತದೆ. ಈ ವಿವ-ರಣೆಗಳು ವೈಜ್ಞಾನಿಕ ಜಗತ್ತಿಗೆ ಇತ್ತೀಚಿನ ತನಕ ತಿಳಿದೇ ಇರಲಿಲ್ಲ.

ಖಗೋಳ ವಸ್ತುಗಳು (ನಕ್ಷತ್ರ, ಗ್ರಹ, ಉಪಗ್ರಹ ಇತ್ಯಾದಿ) ಎಲ್ಲವೂ ಹೊಗೆಯಿಂದ ರಚಿತವಾಗಿದೆ ಎಂದು ಕುರ್‌ಆನ್ ಹೇಳುತ್ತದೆ. ವಿಜ್ಞಾನ ಲೋಕಕ್ಕೆ ಇದರ ಅರಿ-ವಿರಲಿಲ್ಲ. ಆದರೆ ಇಂದು ಯಾರಿಗೂ ಈ ಕುರಿತು ಭಿ-ನ್ನಮತವಿಲ್ಲ.

ಎರಡು ಸಮುದ್ರಗಳು ಒಂದು ನಿರ್ದಿಷ್ಟ ಸ್ಥಳದಲ್ಲಿ ಸೇ-ರುವುದಾದರೆ ಅಲ್ಲಿ ಆ ಎರಡು ಸಮುದ್ರಗಳ ನೀರಿನ ನಡುವೆ ಒಂದು ತಡೆ ಇರುತ್ತದೆ ಎನ್ನುವುದು ಆಧುನಿಕ ವಿಜ್ಞಾನ ಕಂಡುಹಿಡಿದ ಸತ್ಯವಾಗಿದೆ. ಅವುಗಳ ಉಷ್ಣತೆ ಸಾಂದ್ರತೆ ಮತ್ತು ಕ್ಷಾರತೆ ಪರಸ್ಪರ ಭಿನ್ನವಾಗಿರುತ್ತದೆ. ಈ ವಿಷಯವು 1400 ವರ್ಷಗಳ ಹಿಂದೆಯೇ ಪವಿತ್ರ ಕು-

ರ್‌ಆನಿನಲ್ಲಿ ಉಲ್ಲೇಖವಾಗಿದೆ. (ಕುರ್‌ಆನ್ 55:19-20)

ಸರಿಸಾಟಿ ಇಲ್ಲದ ಗ್ರಂಥ

ಕುರ್‌ಆನ್ ಅವತೀರ್ಣವಾದ ಕಾಲದಿಂದ ತೊಡಗಿ ಇಂದಿನ ತನಕ ಅದಕ್ಕೆ ಸರಿಸಾಟಿಯಾದ ಒಂದು ಅಧ್ಯಾಯವನ್ನು ರಚಿಸಿ ತರಲು ವಿರೋಧಿಗಳಿಗೆ ಸಾಧ್ಯವಾಗಲಿಲ್ಲ. ಅದರ ಸೊಗಸು, ಶೈಲಿ, ಭವ್ಯತೆ, ಚಾತುರ್ಯ, ದೂರದೃಷ್ಟಿ ಮತ್ತು ಪಕ್ವತೆ ಅದ್ವಿತೀಯವಾಗಿದೆ.

"ನಮ್ಮ ದಾಸನಿಗೆ ನಾವು ಅವತೀರ್ಣಗೊಳಿಸಿದ (ಕುರ್‌ಆನಿನ) ಕುರಿತು ನಿಮಗೆ ಸಂದೇಹವಿದ್ದರೆ ಅದರಂತೆ ಇರುವ ಒಂದು ಅಧ್ಯಾಯವನ್ನಾದರೂ ತನ್ನಿರಿ. ಅಲ್ಲಾಹನ ಹೊರತು ನಿಮಗಿರುವ ಸಹಾಯಕರನ್ನು ಕರೆದುಕೊಳ್ಳಿ, ನೀವು ಸತ್ಯಸಂಧರಾಗಿದ್ದರೆ ಇದನ್ನು ಮಾಡಿ ತೋರಿಸಿ." (ಕುರ್‌ಆನ್ 2:23)

ಮುಹಮ್ಮದ್(ﷺ) ರನ್ನು ತಿರಸ್ಕರಿಸಿದ ಸಮೂಹವು ಈ

ಸವಾಲನ್ನು ಜಯಿಸಲಿಲ್ಲ. ಅವರು ಕುರ್‌ಆನಿನ ಭಾಷೆ-ಯನ್ನು (ಅರೇಬಿಕ್) ಚೆನ್ನಾಗಿ ತಿಳಿದಿದ್ದರೂ ಅವರಿಗೆ ಈ ಸವಾಲನ್ನು ಜಯಿಸಲಾಗಲಿಲ್ಲ. ಇಂದು ಕೂಡ ಕುರ್‌ಆ-ನಿನ ವಿರೋಧಿಗಳ ಮುಂದೆ ಈ ಸವಾಲು ಜೀವಂತವಾಗಿ ಉಳಿದಿದೆ.

ವೈರುಧ್ಯಗಳಿಲ್ಲ

ಮನುಷ್ಯನು ಎಷ್ಟೇ ಬಲಶಾಲಿಯಾಗಿದ್ದರೂ ಅವನ ಕೆಲಸ ಕಾರ್ಯಗಳಲ್ಲಿ ಕುಂದುಕೊರತೆಗಳು ಇದ್ದೇ ಇರು-ತ್ತವೆ. ಬರಹದಲ್ಲಿ ನಿಷ್ಣಾತರೆನಿಸಿಕೊಂಡವರ ಬರವಣಿ-ಗೆಯಲ್ಲಿ ಅಕ್ಷರ ದೋಷ, ವ್ಯಾಕರಣ ತಪ್ಪುಗಳು, ವೈರು-ಧ್ಯಗಳು ಸತ್ಯಕ್ಕೆ ವಿರುದ್ಧವಾದ ಸುದ್ದಿಗಳು, ಮಾಹಿತಿಯಲ್ಲಿ ಅಸ್ಪಷ್ಟತೆ ಮುಂತಾದ ಕೊರತೆಗಳು ಕಂಡುಬರುತ್ತವೆ. ಅಲ್ಲಾಹು ಹೇಳುತ್ತಾನೆ.

“ಅವರು ಕುರ್‌ಆನಿನ ಕುರಿತು ಚಿಂತಿಸುವುದಿಲ್ಲವೇ?

ಅದು ಅಲ್ಲಾಹು ಅಲ್ಲದವರಿಂದ ಬಂದಿರುತ್ತಿದ್ದರೆ ಅವರು ಅದರಲ್ಲಿ ಅನೇಕ ವೈರುಧ್ಯಗಳನ್ನು ಕಾಣುತ್ತಿದ್ದರು." (ಕುರ್‌ಆನ್ 4:82)

ಕುರ್‌ಆನಿನಲ್ಲಿ ವೈರುಧ್ಯಗಳಿಲ್ಲ. ಅದು ನೀರಿನ ಆವರ್ತನೆಯ ಕುರಿತಾದ ವೈಜ್ಞಾನಿಕ ವಿಶ್ಲೇಷಣೆಯಾಗಲಿ, ಮಾನವ ಭ್ರೂಣದ ಬೆಳವಣಿಗೆಯ ವಿಷಯದಲ್ಲಾಗಲಿ, ಪವನಶಾಸ್ತ್ರ, ಖಗೋಳಶಾಸ್ತ್ರ, ಭೂಗರ್ಭಶಾಸ್ತ್ರ, ಸಾಗರಶಾಸ್ತ್ರ ಮುಂತಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದೇ ಆಗಿರಲಿ ಅದರಲ್ಲಿ ಯಾವುದೇ ವೈರುಧ್ಯಗಳಿಲ್ಲ.

ಇದು ಮುಹಮ್ಮದ್(ﷺ) ಬರೆದ ಕೃತಿಯಲ್ಲ

ಪ್ರವಾದಿ ಮುಹಮ್ಮದ್(ﷺ) ಒಬ್ಬ ಅನಕ್ಷರಸ್ಥರಾಗಿದ್ದರು ಎಂದು ಚರಿತ್ರೆಯಿಂದ ತಿಳಿದುಬರುತ್ತದೆ. ಅವರಿಗೆ ಓದು-ಬರಹ ತಿಳಿದಿಲ್ಲ. ವಿಜ್ಞಾನ ಅಥವಾ ಚರಿತ್ರೆಯ ಜ್ಞಾನವಿಲ್ಲ. ಹೀಗಿರುವಾಗ ಅರೇಬಿಕ್ ಸಾಹಿತ್ಯ ಲೋಕವನ್ನೇ ನಿಬ್ಬೆ-

ರಗುಗೊಳಿಸಿದ ಪರಿಪೂರ್ಣ ಸಾಹಿತ್ಯದಿಂದ ಕೂಡಿದ, ಆಧುನಿಕ ವಿಜ್ಞಾನ ಲೋಕಕ್ಕೆ ಸವಾಲು ಹಾಕುವ ವೈಜ್ಞಾನಿಕ ಮಾಹಿತಿಗಳನ್ನು ಹೊಂದಿದ, ಗತ ಸಮುದಾಯಗಳ ಚರಿತ್ರೆಯನ್ನು, ನಾಗರಿಕತೆಯನ್ನು, ಅಲೆ ಅಲೆಯಾಗಿ ಬಿಡಿಸಿ ತೋರಿಸುವ ಈ ಒಂದು ಅನುಪಮ ಗ್ರಂಥವನ್ನು ಅವರು ರಚಿಸಿದ್ದಾರೆ ಎನ್ನುವುದಕ್ಕೆ ಅರ್ಥವಿಲ್ಲ.

"ಈ ಕುರ್‌ಆನ್ ಅಲ್ಲಾಹನಿಂದಲೇ ಹೊರತು (ಇನ್ನಾರಿಂದಲೂ) ರಚಿಸಲು ಸಾಧ್ಯವಿಲ್ಲ. ಆದರೆ ಇದು ಇದಕ್ಕಿಂತ ಮುಂಚಿನ ಗ್ರಂಥಗಳ ದೃಢೀಕರಣ ಮತ್ತು ಗ್ರಂಥದ ನಿಯಮಗಳ ವಿಷದೀಕರಣವಾಗಿದೆ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನ ವತಿಯಿಂದಾಗಿದೆ." (ಕುರ್‌ಆನ್ 10:37)

ಅವತೀರ್ಣದ ಉದ್ದೇಶ

ಏಕದೇವಾರಾಧನೆಯನ್ನು ನೆಲೆನಿಲ್ಲಿಸುವುದು

“ನಿಮ್ಮ ಆರಾಧ್ಯನು ಏಕಮೇವ ಆರಾಧ್ಯನಾಗಿದ್ದಾನೆ. ಅವನಲ್ಲದೆ ಬೇರೆ ಆರಾಧ್ಯರಿಲ್ಲ. ಅವನು ಪರಮ ದಯಾಮಯ ಮತ್ತು ಕರುಣಾನಿಧಿಯಾಗಿದ್ದಾನೆ.” (ಕುರ್‌ಆನ್ 2:163)

ಕುರ್‌ಆನಿನಲ್ಲಿ ಅತ್ಯಂತ ಮಹತ್ವ ಕಲ್ಪಿಸಲಾದ ವಿಷಯ ಏಕದೇವ ಆರಾಧನೆಯಾಗಿದೆ. ನಿಜವಾದ, ಆರಾಧನೆಗೆ ಅತ್ಯಂತ ಅರ್ಹನಾದ ದೇವನ ಆರಾಧನೆ. ಅಲ್ಲಾಹನಿಗೆ ಯಾವುದೇ ಪಾಲುದಾರರಿಲ್ಲವೆಂದು, ಸಂತಾನ ಇಲ್ಲವೆಂದು, ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲವೆಂದು ಇದರಲ್ಲಿ (ಕುರ್‌ಆನಿನಲ್ಲಿ) ಅಲ್ಲಾಹು ಸ್ಪಷ್ಟಪಡಿಸಿದ್ದಾನೆ. ಅವನ ಹೊರತು ಬೇರೆ ಯಾರಿಗೂ ಆರಾಧಿಸಲ್ಪಡುವ ಹಕ್ಕಿಲ್ಲ. ಅವನಿಗೆ ಹೋಲಿಕೆಯಾಗುವ ಯಾವುದೇ

ವಸ್ತುವೂ ಇಲ್ಲ. ಸೃಷ್ಟಿಗಳಲ್ಲಿ ಯಾವುದೂ ಅವನ ಅನುರೂಪವಾಗಿಲ್ಲ. ಮನುಷ್ಯನಿಗೆ ಇರುವಂತಹ ದೌರ್ಬಲ್ಯ, ಚಂಚಲ ಗುಣಗಳು ಅಲ್ಲಾಹನಿಗೆ ಇಲ್ಲ.

ಮಿಥ್ಯ ದೇವರುಗಳನ್ನು ತಿರಸ್ಕರಿಸುವುದು

“ನೀವು ಅಲ್ಲಾಹನನ್ನು ಆರಾಧಿಸಿರಿ. ಅವನೊಂದಿಗೆ ಏನನ್ನು ಸಹಭಾಗಿಯಾಗಿ ಮಾಡಬೇಡಿ.” (ಕುರ್‌ಆನ್ 4:36)

ಅಲ್ಲಾಹನನ್ನು ಏಕನೆಂದು ಮತ್ತು ಆರಾಧನೆಗೆ ಅರ್ಹನಾದವನು ಅವನು ಮಾತ್ರವೆಂದು ಸಾಕ್ಷ್ಯ ವಹಿಸುವುದರೊಂದಿಗೆ ಅವನ ಹೊರತಾದ ಮಿಥ್ಯ ಆರಾಧ್ಯರೆಲ್ಲರನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಕುರ್‌ಆನ್ ಕೆಲವು ಮನುಷ್ಯರಲ್ಲಿ ಅಥವಾ ವಸ್ತುಗಳಲ್ಲಿ ದೈವಿಕ ಗುಣಗಳಿವೆ ಎನ್ನುವುದನ್ನು ತಿರಸ್ಕರಿಸುತ್ತದೆ.

ಗತ ಮಾನವ ಇತಿಹಾಸವನ್ನು ವಿವರಿಸುವುದು

ಕುರ್‌ಆನಿನಲ್ಲಿ ಹಲವಾರು ಕಥೆಗಳು ಅಥವಾ ವೃತ್ತಾಂತಗಳು ಒಳಗೊಂಡಿದ್ದು ಅದರಲ್ಲಿ ಜನರಿಗೆ ನೀತಿಪಾಠವಿದೆ. ಪೂರ್ವಿಕ ಪ್ರವಾದಿಗಳಾದ ಆದಂ, ನೂಹ್, ಇಬ್ರಾಹಿಂ ಮೂಸಾ ಮತ್ತು ಈಸಾ ರವರ ಜೀವನ ಮತ್ತು ಸಂದೇಶಗಳು ಕುರ್‌ಆನಿನಲ್ಲಿ ಅಡಕವಾಗಿದೆ. ಅಲ್ಲಾಹು ಹೇಳುತ್ತಾನೆ.

“ಅವರ ಚರಿತ್ರೆಯಲ್ಲಿ ಬುದ್ಧಿವಂತರಿಗೆ ಖಂಡಿತವಾಗಿಯೂ ನೀತಿಪಾಠವಿದೆ. ಪೂರ್ವಿಕ ಗ್ರಂಥಗಳ ದೃಢೀಕರಣವೂ ಸಕಲ ವಿಷಯಗಳ ಕುರಿತಾದ ವಿಷದೀಕರಣವೂ ಆಗಿದೆ. ಸತ್ಯ ವಿಶ್ವಾಸಿಗಳಿಗೆ ಕರುಣೆ ಮತ್ತು ಮಾರ್ಗದರ್ಶನವಾಗಿದೆ.” (ಕುರ್‌ಆನ್ 12:111)

ವಿಧಿ ನಿರ್ಣಾಯಕ ದಿನವನ್ನು ನೆನಪಿಸುತ್ತದೆ

ಈ ಪವಿತ್ರ ಗ್ರಂಥವು ಪ್ರತಿಯೊಂದು ಜೀವಿಗೂ ಮರಣದ

ರುಚಿಯನ್ನು ಅನುಭವಿಸಬೇಕಿದೆ ಎನ್ನುವುದನ್ನು ಎಚ್ಚರಿಸುತ್ತಾ ಅಂತಿಮ ದಿನದಲ್ಲಿ ಪ್ರತಿಯೊಬ್ಬರೂ ಅವರ ಜೀವನದಲ್ಲಿ ಮಾಡಿದ ಕರ್ಮಗಳ ಲೆಕ್ಕ ಕೊಡಬೇಕಾಗಿದೆ ಎನ್ನುವುದನ್ನು ನೆನಪಿಸುತ್ತದೆ.

“ಪುನರುತ್ಥಾನ ದಿನ ನಾವು ನ್ಯಾಯ ಪೂರ್ಣ ತಕ್ಕಡಿಗಳನ್ನು ಸ್ಥಾಪಿಸುವೆವು. ಆಗ ಯಾರಿಗೂ ಸ್ವಲ್ಪವೂ ಅನ್ಯಾಯವಾಗುವುದಿಲ್ಲ. ಅದು (ಕರ್ಮ) ಒಂದು ಸಾಸಿವೆ ಕಾಳಿನಷ್ಟು ತೂಕವುಳ್ಳದ್ದಾದರೂ ನಾವು ಅದನ್ನು ತರುವೆವು. ವಿಚಾರಣೆ ಮಾಡುವವರಾಗಿ ನಾವು ಸಾಕು.” (ಕುರ್‌ಆನ್ 21:47)

ಜೀವನದ ಗುರಿ ಸಾಧಿಸುವ ಹಾದಿಯನ್ನು ಸುಗಮಗೊಳಿಸುತ್ತದೆ

ಮುಖ್ಯವಾಗಿ, ಜೀವನದ ಉದ್ದೇಶವೇ ಏಕದೇವನ ಆರಾಧನೆ ಎಂದು ಪವಿತ್ರ ಕುರ್‌ಆನ್ ಕಲಿಸುತ್ತದೆ.

ಅವನ ವಿಧಿ-ನಿರ್ದೇಶನಗಳನ್ನು ಅನುಸರಿಸಿಕೊಂಡು ಜೀವಿಸಬೇಕೆಂದು ತಾಕೀತು ಮಾಡುತ್ತದೆ. ಜೀವನದ ಎಲ್ಲಾ ವಿಭಾಗಗಳಲ್ಲಿ (ಖಾಸಗಿ ಅಥವಾ ಸಾರ್ವಜನಿಕ) ಅಲ್ಲಾಹನನ್ನು ಅನುಸರಿಸಿ ನಡೆಯುವುದು ಆರಾಧನೆ-ಯಾಗಿದೆ ಎಂದು ಇಸ್ಲಾಂ ಸಾರುತ್ತದೆ. ಅವನಿಗೆ ವಿಧೇ-ಯವಾಗಿರುವವರನ್ನು ಅವನು ಪ್ರೀತಿಸುತ್ತಾನೆ. ಆದ್ದ-ರಿಂದ ಅಲ್ಲಾಹನ ಆಜ್ಞೆಗಳನ್ನು ಅನುಸರಿಸಿ ಅವನನ್ನು ಮಾತ್ರ ಆರಾಧಿಸುತ್ತಾ ಬದುಕುವುದರಿಂದ ಜೀವನವು ಧನ್ಯವಾಗುತ್ತದೆ.

ಕುರ್‌ಆನಿನಲ್ಲಿರುವ ಆರಾಧನೆಯ ಕಾರಣಗಳನ್ನು ಕೆಳಗೆ ನೀಡಲಾಗಿದೆ.

ಆರಾಧನಾ ಕರ್ಮಗಳನ್ನು ನಿರ್ವಹಿಸಿ

"ಓ ಸತ್ಯವಿಶ್ವಾಸಿಗಳೇ! ತಲೆಬಾಗಿರಿ, ಸಾಷ್ಟಾಂಗವೆರಗಿರಿ, ನಿಮ್ಮ ಸಂರಕ್ಷಕನನ್ನು ಆರಾಧಿಸಿರಿ ಹಾಗೂ ಸತ್ಕರ್ಮಗ-

ಳನ್ನು ಮಾಡಿರಿ. ನೀವು ಯಶಸ್ವಿಯಾಗಲೂ ಬಹುದು." (ಕುರ್‌ಆನ್ 22:27)

ದಾನ ಮಾಡಿರಿ

"ಮತ್ತು ಸಂಪತ್ತನ್ನು ಒಳಿತಿನ ಮಾರ್ಗದಲ್ಲಿ ಖರ್ಚು ಮಾಡಿರಿ. ಇದು ನಿಮಗೆ ಹಿತಕರವಾಗಿದೆ. ಮನಸ್ಸಿನ ಜಿಪುಣತನದ ಸುರಕ್ಷಿತರಾಗಿರುವವರೇ ಯಶಸ್ಸು ಗಳಿಸುವರು." (ಕುರ್‌ಆನ್ 64:16)

ಪ್ರಾಮಾಣಿಕತೆ ಮೈಗೂಡಿಸಿಕೊಳ್ಳಿ

"ನೀವು ಸತ್ಯವನ್ನು ಅಸತ್ಯದೊಂದಿಗೆ ಕಲಬೆರಕೆ ಮಾಡಬೇಡಿ. ತಿಳಿದವರಾಗಿದ್ದೂ ಸಹ ಸತ್ಯವನ್ನು ಬಚ್ಚಿಡಬೇಡಿ." (ಕುರ್‌ಆನ್ 2:42)

ನೈತಿಕತೆಯನ್ನು ಕಾಪಾಡಿ

"ಸತ್ಯವಿಶ್ವಾಸಿಗಳಾದ ಪುರುಷರು ಮತ್ತು ಸ್ತ್ರೀಯರೊಂ-

ದಿಗೆ ಅವರು ತಮ್ಮ ದೃಷ್ಟಿಗಳನ್ನು ತಗ್ಗಿಸಲು ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲು ಹೇಳಿರಿ." (ಕುರ್‌ಆನ್ 24:30-31)

ಕೃತಜ್ಞತಾಭಾವವಿರಲಿ

"ನೀವು ಏನನ್ನೂ ತಿಳಿದಿರದಂತಹ ಸ್ಥಿತಿಯಲ್ಲಿ ಅಲ್ಲಾಹು ನಿಮ್ಮನ್ನು ನಿಮ್ಮ ತಾಯಿಯ ಉದರದಿಂದ ಹೊರ ತಂದನು. ನಿಮಗೆ ಅವನು ಆಲಿಸುವ ಶಕ್ತಿಯನ್ನು, ದೃ-ಷ್ಟಿಯನ್ನು ಮತ್ತು ಹೃದಯವನ್ನು ನೀಡಿದನು. ನೀವು ಕೃ-ತಜ್ಞರಾಗುವುದಕ್ಕಾಗಿ." (ಕುರ್‌ಆನ್ 16:78)

ನ್ಯಾಯ ನಿಷ್ಠೆ ಇರಲಿ

"ಓ ಸತ್ಯವಿಶ್ವಾಸಿಗಳೇ! ನೀವು ನ್ಯಾಯದ ಕುರಿತು ಅಚಲ ನಿಷ್ಠೆಯುಳ್ಳವರಾಗಿರಿ ಮತ್ತು ನಿಮ್ಮ ಒಡೆಯನಾದ ಅಲ್ಲಾ-ಹನಿಗಾಗಿ ಸಾಕ್ಷ್ಯ ವಹಿಸಿರಿ. ಅದು ಸ್ವತಃ ನಿಮಗೆ ನಿಮ್ಮ ಮಾತಾಪಿತರಿಗೆ ಅಥವಾ ನಿಮ್ಮ ನಿಕಟ ಸಂಬಂಧಿಕರಿಗೆ

ವಿರುದ್ಧವಾಗಿದ್ದರೂ ಸರಿ. ನ್ಯಾಯ ಬೇಡುವವನು ಧನಿಕನಾದರೂ ಬಡವನಾದರೂ ಸರಿ..." (ಕುರ್‌ಆನ್ 4:135)

ಸಹನೆ ಪಾಲಿಸಿರಿ

"ನೀವು ಸಹನೆ ಪಾಲಿಸಿರಿ. ಖಂಡಿತವಾಗಿಯೂ ಅಲ್ಲಾಹು ಸತ್ಕರ್ಮಗಳ ಪ್ರತಿಫಲವನ್ನು ವ್ಯರ್ಥಗೊಳಿಸುವುದಿಲ್ಲ." (ಕುರ್‌ಆನ್ 11:115)

ಒಳಿತಿನ ಕಾರ್ಯಗಳಲ್ಲಿ ತೊಡಗಿರಿ

"ವಿಶ್ವಾಸವಿಟ್ಟವರು ಮತ್ತು ಸತ್ಕರ್ಮವೆಸಗಿದವರು ಯಾರೋ ಅವರಿಗೆ ಅಲ್ಲಾಹು ಪಾಪಮುಕ್ತಿ ಮತ್ತು ಶ್ರೇಷ್ಠ ಪ್ರತಿಫಲವನ್ನು ವಾಗ್ದಾನ ಮಾಡಿದ್ದಾನೆ." (ಕುರ್‌ಆನ್ 5:9)

ಉಪಸಂಹಾರ

ಸಂಕ್ಷಿಪ್ತವಾಗಿ ಹೇಳುವುದಾದರೆ ಕುರ್‌ಆನ್ ಮಾನ-

ವಕುಲಕ್ಕೆ ಏಕದೇವಾರಾಧನೆಯ ಕ್ರಮವನ್ನು ಮತ್ತು ಅದಕ್ಕಿರುವ ಮಹತ್ವವನ್ನು ಕಲಿಸಿಕೊಡುತ್ತದೆ. ಜೀವನದ ಉದ್ದೇಶ ಮತ್ತು ಗುರಿಯನ್ನು ಮನವರಿಕೆ ಮಾಡಿಕೊಟ್ಟು ಅದಕ್ಕೆ ಬದ್ಧವಾಗಿ ಜೀವಿಸುವ ಮಾರ್ಗವನ್ನು ತೋರಿಸುತ್ತದೆ. ಇಹಲೋಕ ಮತ್ತು ಪರಲೋಕದಲ್ಲಿ ವಿಜಯಗಳಿಸುವುದಕ್ಕಿರುವ ಸುಂದರ ಜೀವನಕ್ರಮವನ್ನು ಪರಿಚಯಿಸುತ್ತದೆ.

“ನಿಶ್ಚಯವಾಗಿಯೂ ನಾವು ನಿಮ್ಮ ಮೇಲೆ ಸತ್ಯ ಸಹಿತ ಈ ಗ್ರಂಥವನ್ನು ಜನರಿಗಾಗಿ ಅವತೀರ್ಣಗೊಳಿಸಿದ್ದೇವೆ. ಇದರ ಮೂಲಕ ಯಾರಾದರೂ ಸನ್ಮಾರ್ಗ ಪಡೆದರೆ ಅದು ಅವನ ಒಳಿತಿಗೇ ಆಗಿದೆ. ಯಾರಾದರೂ ಪಥಭ್ರಷ್ಟರಾಗಿಯೇ ಉಳಿಯುವುದಾದರೆ ಅವನ ಪಥಭ್ರಷ್ಟತೆಯ ಪಾಪವು ಅವನಿಗೇ ಆಗಿದೆ.” (ಕುರ್‌ಆನ್ 39:41)

ದಯವಿಟ್ಟು ಇದನ್ನು ಕಡೆಗಣಿಸಬೇಡಿ. ಕನಿಷ್ಠ ಒಂದು ಬಾರಿಯಾದರೂ ಕುರ್‌ಆನನ್ನು ಓದಿನೋಡಿ.

“ನಿಮ್ಮಲ್ಲಿ ಒಳಿತಿನೆಡೆಗೆ ಆಮಂತ್ರಿಸುವ, ಸತ್ಕರ್ಮಗಳನ್ನು ಆದೇಶಿಸುವ ಮತ್ತು ದುಷ್ಕರ್ಮಗಳಿಂದ ತಡೆಯುವ ಒಂದು ಜನಸಮೂಹವು ಇರಬೇಕಾದುದು ಅಗತ್ಯವಾ-ಗಿದೆ. ಅವರೇ ಜಯಶಾಲಿಯಾಗುವವರು.” (ಕುರ್‌ಆನ್ 3:104)

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575:014
MOB: 9731593091 / 9945171612

Jamiyathe Ahle Hadees
Mangalore